ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ – 145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ: 05.12.2020 ರಂದು ಶನಿವಾರ ಮಧ್ಯಾಹ್ನ 12.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
| --- | --- |
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್ 145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE,HI, TI, Horticulture, Forest, BWSSB & BESCOM<br>3) ವಿನಾಯಕ ಬಳಗದ ಸಂಘದವರು.. | 1) Traffic & Police Department |

** ** **

1. ಈ ಹಿಂದಿನ ಸಭೆಯಲ್ಲಿ ಗುಪ್ತ ಲೇಔಟ್ ರಸ್ತೆಗಳಲ್ಲಿ Sweeping ಕಾರ್ಯ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿದ್ದ ಮೇರಗೆ ಆ ವ್ಯಾಪ್ತಿಯ ಪೌರಕಾರ್ಮಿಕರನ್ನು ಬದಲಾಯಿಸಲು ಸೂಚಿಸಲಾಗಿತ್ತು ಅದರಂತೆ ಅಲ್ಲಿನ ಪೌರಕಾರ್ಮಿಕರನ್ನು ಬದಲಾಯಿಸಲಾಗಿದೆ.
2. ಕೊಳದ ಮಠದ ಬ್ಲಾಕ್ ಸ್ಪಾಟ್ ತಪಾಸಣೆಯನ್ನು ಆಗಾಗ ನಡೆಸುತ್ತಿದ್ದು ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಅಗತ್ಯ ಕ್ರಮ ವಹಿಸುವುದು.
3. ಸಾರ್ವಜನಿಕರು ಆಟೋ ಟಿಪ್ಪರ್ ಪ್ರತಿನಿತ್ಯ ನಿಲ್ಲುವ ತಾಣದಲ್ಲಿ ಕಸವನ್ನು ತಂದು ಎಸೆಯುತ್ತಿರುವುದರಿಂದ ಡ್ರೈವರ್‌ಗಳಿಗೆ HI ರವರು ಆಟೋ ಟಿಪ್ಪರ್ ನಿಲ್ಲಿಸುವ ಜಾಗವನ್ನು ಪ್ರತಿನಿತ್ಯ ಬದಲಾಯಿಸಲು ಸೂಚಿಸುವುದು.
4. ವಾರ್ಡ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಏನೇನು ಸೌಲಭ್ಯ (Gloves,Sanitizers & Push Carts...etc) ನೀಡುತ್ತಿರುವ ಬಗ್ಗೆ ಮಾಹಿತಿ ಒದಗಿಸುವುದು.
5. ಕಸದ ಗಾಡಿಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ವಿಂಗಡಣೆ ಬಗ್ಗೆ Announcement ಇಲ್ಲದ ಕಾರಣ ಕಸ ವಿಂಗಡಣೆಗೆ ತೊಂದರೆಯಾಗುತ್ತಿದೆ. ಆದ್ದರಿಂದ ಕಸ ವಿಂಗಡಣೆ ಬಹಳ ಮುಖ್ಯವಾಗಿರುತ್ತದೆ.

ಪು.ತಿ.ನೋ

Scanned with CamScanner

6. ಕಡ್ಡಾಯವಾಗಿ ಪ್ರತಿ ದಿನ ಆಟೋಗಾಡಿಗಳಲ್ಲಿ ಕಸ ಸಂಗ್ರಹಣೆ ವೇಳೆಯಲ್ಲಿ ಮೈಕ್ ಮುಖಾಂತರ ಒಣ ಮತ್ತು ಹಸಿ ತ್ಯಾಜ್ಯವನ್ನು ವಿಂಗಡಿಸಿ ನೀಡುವ ಬಗ್ಗೆ ಅರಿವು ನೀಡಲು AE ಘನತ್ಯಾಜ್ಯರವರು ಕ್ರಮವಹಿಸುವುದು.
7. 14ನೇ ಕ್ರಾಸ್, 8ನೇ ಮುಖ್ಯ ರಸ್ತೆಯಲ್ಲಿ ಇರುವ ಪಾಲಿಕೆಯ ಖಾಲಿ ಜಾಗದಲ್ಲಿ ಸ್ಥಳೀಯ ಮಾಂಸ ಅಂಗಡಿಯವರು ಮಾಂಸದ ತ್ಯಾಜ್ಯಗಳ (ಹಸು ತಲೆ) ಇತರೆ ತ್ಯಾಜ್ಯಗಳನ್ನು ಸಾರ್ವಜನಿಕರ ಮನೆಯ ಮುಂದೆ ತಂದು ಎಸೆಯುತ್ತಿರುವುದರಿಂದ ಮೂಳೆಗಳು ಹಾಗೂ ಕಾಲುಗಳು ಅಲ್ಲಿನ ವಾಸಿಗಳಿಗೆ ಹಾಗೂ ಸುತ್ತಮುತ್ತಲ್ಲಿನ ಶುಚಿತ್ವಕ್ಕೆ ಹಾನಿಯುಂಟಾಗುತ್ತಿರು–ವುದರಿಂದ ಸಂಬಂಧಪಟ್ಟ ಅಂಗಡಿ ವ್ಯಾಪಾರಿಗಳಿಗೆ ಸೂಕ್ತ ನಿರ್ದರ್ಶನ ನೀಡಿ ಕ್ರಮವಹಿಸಲು ಕೋರಿದ್ದು, ಈ ಬಗ್ಗೆ HI ರವರು ಅಂಗಡಿಯವರಿಗೆ ನೋಟಿಸ್ ನೀಡಲು ತಿಳಿಸಲಾಯಿತು.
8. ಬಿ.ಬಿ.ಎಂ.ಪಿ ಸ್ವತ್ತಾಗಿರುವುದರಿಂದ ಅಲ್ಲಿನ ಜಾಗವನ್ನು ಶುಚಿತ್ವಗೊಳಿಸಿ ಗಿಡಗಳನ್ನು ನೆಟ್ಟು ಸ್ವತ್ತಿನ ಸಂರಕ್ಷಣೆಗೆ ಸುತ್ತಲು **Blue Colour Sheet** ನ್ನು ಅಳವಡಿಸಿ ಗೇಟ್ ಹಾಕಿ ಸಿ.ಸಿ.ಟಿ.ವಿ., ಅಳವಡಿಸಲು AEE ಸೂಚಿಸಲಾಯಿತ್ತು.
9. ಬಿ.ಎಂ.ಟಿ.ಸಿ ನಿಲ್ದಾಣದ ಸಿಬ್ಬಂಧಿಯವರು ಕಸದ ಗಾಡಿ ಆ ಜಾಗಕ್ಕೆ ಹೋಗುತ್ತಿಲ್ಲದ ಕಾರಣ ಕಸವನ್ನು ತಂದು ರಸ್ತೆ ಬದಿಗಳಲ್ಲಿ ಬಿಸಾಡುತ್ತಿರುವುದರಿಂದ ಇನ್ನು ಮುಂದೆ ಬಿ.ಎಂ.ಟಿ.ಸಿ ನಿಲ್ದಾಣಕ್ಕೆ ಕಸದ ಆಟೋ ಗಾಡಿಗಳು ಹೋಗುವಂತೆ ಸೂಚಿಸಲು ಸಂಬಂಧಪಟ್ಟ ಸಿಬ್ಬಂಧಿಯವರು ತಿಳಿಸುವುದು.
10. BWSSB ಇಲಾಖೆಯವರು ವಾರ್ಡ್–145 ರಲ್ಲಿ ತಮ್ಮ ಮುಂದಿನ ಅಭಿವೃದ್ಧಿ ಕಾರ್ಯ ಹಾಗೂ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು.
11. ಗುಪ್ತ ಲೇಔಟ್, 15ನೇ ಕ್ರಾಸ್‌ನಲ್ಲಿ ವಿದ್ಯುತ್ ಕಂಬ ಬಗ್ಗಿರುವುದನ್ನು ಕೂಡಲೇ ಪರಿಶೀಲಿಸಿ BESCOM ರವರು ಅಗತ್ಯ ಕ್ರಮ ವಹಿಸುವುದು.
12. ವಿಲ್ಸನ್ ಗಾರ್ಡ್‌ನ್ 5ನೇ ಕ್ರಾಸ್‌ನಲ್ಲಿ ಮರದ ರಂಬೆ, ಕೊಂಬೆಗಳು ಮನೆಗಳ ಮೇಲೆ ಬಗ್ಗಿರುವುದರಿಂದ ಅವುಗಳನ್ನು ಟ್ರಿಮ್ ಮಾಡಿಸುವ ಬಗ್ಗೆ ಗಮನ ಹರಿಸುವುದು.
13. ಮರದ ರಂಬೆ, ಕೊಂಬೆ ಹಾಗೂ ದಿಮ್ಮಿಗಳು ಹೆಚ್ಚು ಬೆಳೆದಿರುವುದನ್ನು ತೆಗೆಯಲು ಎಲ್ಲಾ ರಸ್ತೆಗಳಲ್ಲಿ ಮಾಸಿಕ ಡ್ರೈವ್ ಕಾರ್ಯ ಯೋಜನೆಯನ್ನು ನಡೆಸುವುದು–ಅರಣ್ಯ ಸಿಬ್ಬಂದಿ.
14. ಶಾಂತಿನಗರ ಬಸ್ ನಿಲ್ದಾಣದ ಕಾಂಪೌಂಡ್‌ನಿಂದ ರಸ್ತೆ ಕಡೆಗೆ ಮರದ ಕೊಂಬೆಗಳು ರಸ್ತೆಗೆ ಬಾಗುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವ ಕಾರಣ Forest ಇಲಾಖೆಯವರು ಗಮನಹರಿಸಿ ಸೂಕ್ತ ಕ್ರಮವಹಿಸುವುದು.
15. ವಿಲ್ಸನ್ ಗಾರ್ಡ್‌ನ್ ಸ್ಮಶಾನ ಸ್ವಚ್ಛಗೊಳಿಸುವುದರ ಬಗ್ಗೆ AEE ಹಾಗೂ HI ರವರು ಕಾರ್ಯ ಯೋಜನೆ ರೂಪಿಸಲು ಸೂಚಿಸಲಾಯಿತು.
16. ಮುಖ್ಯ ರಸ್ತೆಗಳಲ್ಲಿ ದೊಡ್ಡ ಮರಗಳು ಒಣಗಿ ಹೋಗಿದ್ದರೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುವುದರಿಂದ ಕೂಡಲೇ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಲಾಯಿತು.

ಮು.ತಿ.ನೋ

Scanned with CamScanner

17. ಅನೇಕ ವಾಹನಗಳು ರಸ್ತೆಗಳ ಇಕ್ಕೆಲಗಳಲ್ಲಿ ನಿಂತಿರುವುದರಿಂದ ವಾಹನ ಸಂಚಾರಕ್ಕೆ, ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗಿ ರಸ್ತೆ ಅಪಘಾತಕ್ಕೆ ಕಾರಣವಾಗುವುದರಿಂದ ಟ್ರಾಫಿಕ್ ಪೋಲಿಸ್ ಇಲಾಖೆರವರು ಅಗತ್ಯ ಕ್ರಮವಹಿಸುವುದು.
18. ಫುಟ್‌ಪಾತ್‌ಗಳಲ್ಲಿ ಅನಧಿಕೃತವಾಗಿ (Foot Path Encroachment) ಅಂಗಡಿಗಳನ್ನು ಇಟ್ಟು ಪಾದಚಾರಿಗಳಿಗೆ ತೊಂದರೆ ಮಾಡುತ್ತಿರುವ ಅಂಗಡಿಗಳನ್ನು ತೆರವುಗೊಳಿಸಲು ವ್ಯಾಪರಸ್ಥರಿಗೆ ಸೂಕ್ತ ನಿದರ್ಶನ ನೀಡಲು AEE ರವರಿಗೆ ಸೂಚಿಸಲಾಯಿತು.
19. ರಸ್ತೆಗಳಲ್ಲಿ ದೊಡ್ಡ ದೊಡ್ಡ ಗುಂಡಿಗಳು ಇರುವುದರಿಂದ ವಾಹನ ಸಂಚಾರ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಾರಣ ಕೂಡಲೇ ಅವುಗಳನ್ನು ಮುಚ್ಚಿಸಲು AEE ರವರು ಅಗತ್ಯ ಕ್ರಮ ವಹಿಸುವುದು.
20. ಶಾಂತಿನಗರ ಬಸ್ ನಿಲ್ದಾಣದ ಸಮೀಪದಲ್ಲಿರುವ ಎ2ಬಿ ಎದುರು ಗಡೆ ಕಸದ ರಾಶಿ ಹಾಗೂ Debris ಹೆಚ್ಚಾಗಿದ್ದು ಸುತ್ತಮುತ್ತಲ್ಲಿನ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಹಾನಿ ಉಂಟಾಗುತ್ತಿರುವುದರಿಂದ ಕಸದ ರಾಶಿಯನ್ನು ತೆರವುಗೊಳಿಸಿ ಸ್ವಚ್ಛತೆಯನ್ನು ಕಾಪಾಡುವುದು.
21. Snake Catchers ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಮಾಹಿತಿಯನ್ನು ನೀಡುವುದು.
22. ಅನೇಕ ಪೌರಕಾರ್ಮಿಕರುಗಳ ಮನೆಗಳು ತುಂಬಾ ದೂರ ರವ ಕಾರಣ ಸಕಾಲದಲ್ಲಿ ಈ ವಾರ್ಡ್‌ಗೆ ಬಂದು ಕೆಲಸ ನಿರ್ವಹಿಸಲು ಕಷ್ಟ ಸಾಧ್ಯವಾಗುತ್ತಿರುವ ಕಾರಣ HI ರವರು ಪೌರಕಾರ್ಮಿಕರ ಹೆಸರು, ದೂರವಾಣಿ ಸಂಖ್ಯೆ ಹಾಗೂ ವಾಸ ಸ್ಥಳದ ಬಗ್ಗೆ ವಿವರ ಪಡೆದು ಸಲ್ಲಿಸಲು ಸೂಚಿಸಲಾಯಿತು.
23. ಮಾನ್ಯ ಆಯುಕ್ತರು ರವರು ಸೂಚಿಸಿರುವಂತೆ ವಾರ್ಡ್‌ಗಳಲ್ಲಿ ರಸ್ತೆವಾರು ಪರಿಶೀಲಿಸಿ ಶೌಚಾಲಯಗಳ ಇರುವಿಕೆ ಹಾಗೂ ಸುಸ್ತಿತಿಯಲ್ಲಿ ಇರುವ ಬಗ್ಗೆ ಮಾಹಿತಿಯನ್ನು ನೀಡುವುದು.
24. ಜನ ನಿರ್ಮಿತ ಪ್ರದೇಶ (ಮಾರ್ಕೆಟ್, ಬಸ್ ನಿಲ್ದಾಣ......ಇತರೆ) ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳು ಇಲ್ಲದಿರುವ ಕಡೆ ಶೌಚಾಲಯಗಳ್ನು ನಿರ್ಮಿಸಲು ಮಾನ್ಯ ಆಯುಕ್ತರು ರವರು ಸೂಚಿಸಿರುವುದರಿಂದ ಸ್ಥಳ ಪತ್ತೆ ಹಚ್ಚಿ ಮಾಹಿತಿ ಒದಗಿಸಲು Welfare Association ರವರಿಗೆ ಹಾಗೂ ಅಧಿಕಾರಿಗಳಿಗೆ ಸೂಚಿಸಲಾಯಿತು..
25. 14ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್, ಹರಿ ಲಕ್ಷ್ಮೀ ಥಿಯೇಟರ್ ಕಟ್ಟಡವು ನ್ಯಾಯಲಯದ ದಾವೆಯಲ್ಲಿದ್ದು ಬಹಳ ಹಳೆಯ ಕಟ್ಟಡವಾದ್ದರಿಂದ ಸುಮಾರು 25 ವರ್ಷದಿಂದ ಪಾಳುಬಿದ್ದಿರುವ ಕಟ್ಟಡದಲ್ಲಿ, ಅಕ್ರಮ ಹಾಗೂ ಅನೈತಿಕ ಚಟುವಟಿಕೆಗಳನ್ನು ನಡೆಯುತ್ತಿರುವುದ್ದು ಸುತ್ತಮುತ್ತಲ್ಲಿನ ವಾಸಿಗರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ಸಂಘದವರು ತಿಳಿಸಿರುತ್ತಾರೆ. ಅಲ್ಲದೆ ಸದರಿ ಕಟ್ಟಡವು ಪಾಳು ಬಿದ್ದಿರುವ ಕಾರಣ ಅಲ್ಲಿ ಸ್ಥಳೀಯರು ಕಸವನ್ನು, Debrisಗಳನ್ನು ತಂದು ಸುರಿಯುತ್ತಿದ್ದು ಆ ಜಾಗ ಒಂದು ಸ್ಲಂ ಪ್ರದೇಶದಂತೆ-

ಪು.ತಿ.ನೋ

Scanned with CamScanner

ಆಗಿದ್ದು, ಮಳೆ ಬಂದಾಗ ಕಿರಿದಾದ ರಸ್ತೆಗೆ ಕಸ, ಮಣ್ಣು ಎಲ್ಲಾ ಬಂದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದು ಕಸದಿಂದ ವಾಸನೆ, ಸೊಳ್ಳೆಗಳ, ಇಲಿ ಕಾಟ ಹೆಚ್ಚಾಗಿ ಸ್ಥಳೀಯರ-ಆರೋಗ್ಯದ ಮೇಲೆ ಬೀರುತ್ತಿದ್ದು, ಪ್ರತಿ ದಿನ ಈ ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ ಮಕ್ಕಳು ಮತ್ತು ವೃದ್ಧರ ಆರೋಗ್ಯದ ಹಿತದೃಷ್ಟಿಯಿಂದ ಮಹಿಳೆಯರ ಸಂರಕ್ಷತೆಯ ಹಿತದೃಷ್ಟಿಯಿಂದ ಈ ಸ್ಥಳವನ್ನು ಮಾಲೀಕರು ಸ್ವಚ್ಛಗೊಳಿಸಿ ಅವರ ಸ್ವತ್ತಿಗೆ ಕಾಂಪೌಂಡ್ ನಿರ್ಮಿಸಿಕೊಳ್ಳಲು ಗಂಭೀರವಾಗಿ ಸೂಚಿಸಬೇಕೆಂದು ಸ್ಥಳೀಯ ನಾಗರೀಕರು ಕೋರಿರುತ್ತಾರೆ. ಸದರಿ ಸ್ವತ್ತಿನ ಬಗ್ಗೆ ನ್ಯಾಯಲಯದ ಆದೇಶಗಳನ್ನು ಪಡೆಯಲು ಹಾಗೂ ಬಿ.ಬಿ.ಎಂ.ಪಿ., ಗೆ ಕಂದಾಯ ಬಾಕಿ ಎಷ್ಟುಯಿದೆ ಎಂಬುದನ್ನು ತಿಳಿಸಲು ಸ.ಕಂ.ಅ ರವರಿಗೆ ಸೂಚಿಸಲಾಯಿತು. ಅಲ್ಲದೆ BWSSB ಹಾಗೂ BESCOM ಗೂ ಎಷ್ಟು ಶುಲ್ಕ ಬಾಕಿ ಇದೆ ಎನ್ನುವ ಮಾಹಿತಿ ಪಡೆಯಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

26. ಸದರಿ ಸ್ಥಳದಲ್ಲಿ ವಾಸಿಸುತ್ತಿರುವ ಸುತ್ತಮುತ್ತಲ್ಲಿನ ವಾಸಿಗರ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ ಪ್ರಸ್ತಾಪಿತ ಸ್ವತ್ತಿಗೆ HI ರವರು ಕೂಡಲೇ ನೋಟಿಸ್ ನೀಡಲು ಸೂಚಿಸಲಾಯಿತು. ಸದರಿ ಸ್ಥಳದಲ್ಲಿ ಅಕ್ರಮ ಹಾಗೂ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದಾಗಿ ರಾತ್ರಿ ವೇಳೆಗಳಲ್ಲಿ ಹೆಣ್ಣು ಮಕ್ಕಳು ಓಡಾಡಲು ಕಷ್ಟವಾಗುತ್ತಿರುವುದೆಂದು ಅಲ್ಲಿನ ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುವ ಮೇರೆಗೆ ಪೋಲಿಸ್ ಠಾಣೆಗೆ ಈ ಬಗ್ಗೆ ದೂರು ನೀಡಲು ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ ಹಾಗೂ | ಅಧ್ಯಕ್ಷರು ಹಾಗೂ |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ – 145 | ವಾರ್ಡ್ ಸಂಖ್ಯೆ – 145 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು:-

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner

ದಿ: 05/12/2020 ರಂದು ನಡೆದ ವಾರ್ಡ್-145 ಹೊಂಬೇಗೌಡನಗರ ವಾರ್ಡ್ ಕಮಿಟಿ ಮೀಟಿಂಗ್ (ಫೋಟೋ)





Scanned with CamScanner